ಕರ್ನಾಟಕ ಸರ್ಕಾರ

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ,
ಹಾಸನ ವೃತ್ತ, ಹಾಸನ - 573 102

☎ಕ: 08172-240163
☎ಮ:08172-267398

ccfhassan@gmail.com

ಸಂಖ್ಯೆ:ಎ8/ಲ್ಯಾಂಡ್/ಅಸಕಾ/ಸಿಆರ್-13/2020-21 ದಿನಾಂಕ:16 ನೇ ಅಕ್ಟೋಬರ್-2020

ಇವರಿಗೆ

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಪ್ರಾದೇಶಿಕ ವಿಭಾಗ,
ಹಾಸನ.

ವಿಷಯ:- Diversion of 0.94 ha of Forest Land in Seege Guddadha Kaval Village Sy no.48, Salagame Hobli, Hassan Taluk & District for improvement to road from Seege Veerapura road to Malemalleshwara Swamy Temple road in favour of the Executive Engineer, Public Works, Ports & Inland Water Transport Department, Hassan.

ಉಲ್ಲೇಖ:- 1) ನಿಮ್ಮ ಪತ್ರ ಸಂಖ್ಯೆ:ಎ4/ಲ್ಯಾಂಡ್/ಎಫ್‌ಸಿ/ಸಿಆರ್-05/2020-21, ದಿನಾಂಕ:06-10-2020.
2) Proposal No:FP/KA/ROAD/45454/2020.

**********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಹಾಸನ ಜಿಲ್ಲೆ, ಹಾಸನ ತಾಲ್ಲೂಕು, ಸಾಲಗಾಮೆ ಹೋಬಳಿ, ಸೀಗೆ-ವೀರಾಪುರ ರಸ್ತೆಯ ಮಳೆಮಲ್ಲೇಶ್ವರ ದೇವಸ್ಥಾನಕ್ಕೆ ಸಂಪರ್ಕ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ ಸಲುವಾಗಿ 0.94 ಹೆಕ್ಟೇರ್ ಅರಣ್ಯ ಭೂಮಿಯನ್ನು ಉಪಯೋಗಿಸುವ ಕುರಿತು ಪ್ರಸ್ತಾವನೆಯನ್ನು ಈ ಕಛೇರಿಯಲ್ಲಿ ಪರಿಶೀಲಿಸಲಾಗಿ ಈ ಕೆಳಕಂಡಂತೆ ನ್ಯೂನ್ಯತೆ/ಆಕ್ಷೇಪಣೆಗಳೊಂದಿಗೆ ಪ್ರಸ್ತಾವನೆಯನ್ನು ಹಿಂದಿರುಗಿಸಿದೆ.

1. ಸದರಿ ರಸ್ತೆಯು ಮೆ॥ ಸುಜಲಾನ್ ಎನರ್ಜಿ ಲಿಮಿಟೆಡ್, ಬೆಂಗಳೂರು ರವರಿಗೆ ಈಗಾಗಲೇ ಲೀಸ್‌ಗೆ ನೀಡಿರುವ ಪ್ರದೇಶದಲ್ಲಿ ಹಾದು ಹೋಗುತ್ತದೆಯೇ? ಅಥವಾ ಹೊಸ ರಸ್ತೆಯೇ ಎಂಬ ಬಗ್ಗೆ ಸ್ಪಷ್ಟೀಕರಣ ನೀಡುವುದು. ಒಂದೊಮ್ಮೆ ಮೆ॥ ಸುಜಲಾನ್ ಎನರ್ಜಿ ಲಿಮಿಟೆಡ್ ರವರಿಗೆ ಈಗಾಗಲೇ ಲೀಸ್‌ಗೆ ನೀಡಿರುವ ಪ್ರದೇಶದಲ್ಲಿ ಹಾದು ಹೋಗುತ್ತದೆಯಾದರೆ ಅದರ ವಿಸ್ತೀರ್ಣವನ್ನು ನಕ್ಷೆಯಲ್ಲಿ ಪ್ರತ್ಯೇಕವಾಗಿ ಗುರುತಿಸಿ ಟಿಪ್ಪಣಿ ಸಲ್ಲಿಸಲು ಸೂಚಿಸಿದೆ.
2. ದಿನಾಂಕ:13-10-2020 ರಂದು ಈ ಕೆಳಸಹಿದಾರರು ನಿಮ್ಮೊಂದಿಗೆ ಖುದ್ದಾಗಿ ಪ್ರಶ್ನಿತ ಪ್ರದೇಶದ ಸ್ಥಳ ಪರಿವೀಕ್ಷಣೆಯ ಸಂದರ್ಭದಲ್ಲಿ ನೀಡಿದ ನಿರ್ದೇಶನದಂತೆ ಸೂಕ್ತ ಪ್ರಸ್ತಾವನೆಯನ್ನು ದಾಖಲಾತಿಗಳೊಂದಿಗೆ 05 ಪ್ರತಿಗಳೊಂದಿಗೆ ಸಲ್ಲಿಸಲು ಸೂಚಿಸಿದೆ.
3. ಸದರಿ ರಸ್ತೆಯು ಹಾದು ಹೋಗುವ ಪ್ರದೇಶವನ್ನು ಸೂಚಿಸುವ ನಕ್ಷೆಗೆ ವಲಯ ಅರಣ್ಯಾಧಿಕಾರಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ಸ್ಥಳ ಪರಿಶೀಲಿಸಿರುವ ಬಗ್ಗೆ ದೃಢೀಕರಿಸಿರುವುದಿಲ್ಲ. ಸದರಿ ರಸ್ತೆ ಹಾದು ಹೋಗುವ ಪ್ರದೇಶವನ್ನು ಸೂಚಿಸುವ ನಕ್ಷೆಯನ್ನು ಸಂಬಂಧಿಸಿದ ಅರಣ್ಯಾಧಿಕಾರಿಗಳು ಸ್ಥಳ ಪರಿಶೀಲಿಸಿ ದೃಢೀಕರಿಸಿ ಸಲ್ಲಿಸಲು ಸೂಚಿಸಿದೆ.

ಉಲ್ಲೇಖ (1) ರ ಪತ್ರದೊಂದಿಗೆ ನೀವು ಸಲ್ಲಿಸಲಾದ ಪೂರ್ಣ ಪ್ರಸ್ತಾವನೆಯನ್ನು ಮುಂದಿನ ಅಗತ್ಯ ಕ್ರಮಕ್ಕಾಗಿ ಈ ಪತ್ರದೊಂದಿಗೆ ಹಿಂತಿರುಗಿಸಿದೆ.

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
ಹಾಸನ ವೃತ್ತ, ಹಾಸನ.

f:New folder:A8:letters:A8-DCF-Hsn (T)2.com